*ಶ್ರೀ ಕೋಣಂದೂರು ಲಿಂಗಪ್ಪ: ಮಾನ್ಯ ಅಧ್ಯಕ್ಷಣಿಯವರೇ, ಸರ್ಕಾರದ ವತಿಯಿಂದ ಮಲೆನಾಡಿನ ಅಭಿವೃದ್ಧಿ ಬಗ್ಗೆ ಎಲ್ಲ ರೀತಿಯ ಕಳಕಳಿಯನ್ನೂ ಹೊಂದಿರುವ ಮಾತುಗಳನ್ನು ನಾನು ಕೇಳಿದ್ದೇನೆ. ಅವರು ಕೊಟ್ಟ ಭರವಸೆ ಬಗ್ಗೆ ನನಗೆ ಸಂಪೂರ್ಣವಾಗಿ ವಿಶ್ವಾಸವಿಲ್ಲ. ಸರ್ಕಾರದವರು ಕೊಡುವ ಭರವಸೆ ಹೊಸದಲ್ಲ. ಉದಾಹರಣೆಗೆ ನಮ್ಮಲ್ಲಿ ರಸ್ತೆಗಳನ್ನು ತೆಗೆದುಕೊಂಡಿರುವುದಕ್ಕೆ ಜಲ್ಲಿ ಹಾಕಿಲ್ಲ. ಜಲ್ಲಿ ಹಾಕದೆ ಹೋದರೆ ಒಂದು ಮಳೆ ಬಂದರೆ ಸಾಕು ಮಣ್ಣೆಲ್ಲ ತೊಳೆದುಕೊಂಡು ಹೋಗುತ್ತದೆ. ಅಭಿವೃದ್ಧಿಯ ಮಾತೂ ಹೀಗೆಯೇ, ಸೇತುವೆಗಳೂ ಹಾಗೆಯೇ ಮೋರಿಗಳು ಪ್ರತಿಯೊಂದು ಹೀಗೆಯೇ. ಅದಕ್ಕೋಸ್ಕರವಾಗಿಯೇ ಮಲೆನಾಡಿನ ಅಭಿವೃದ್ಧಿಗೋಸ್ಕರ ಒಂದು ಮಂಡಲಿ ಬೇಕು ಎಂದು ಹೇಳುತ್ತಿದ್ದೇವೆ. ಮಲೆನಾಡು ಎಂದರೆ ಧಾರವಾಡ ಜಿಲ್ಲೆ, ಕಾರವಾರ, ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಮೈಸೂರು, ಕೊಡಗು ಇಷ್ಟು ಜಿಲ್ಲೆಗಳು ಸೇರುತ್ತವೆ. ಮಲೆನಾಡು ಎಂದರೆ ಶಿವಮೊಗ್ಗ ಜಿಲ್ಲೆ ಅಥವಾ ನಾವು ಒರುವ ಪ್ರದೇಶಗಳು ಮಾತ್ರವಲ್ಲ. ಇಡೀ ಮಲೆನಾಡಿನ ಸಮಗ್ರ ಅಭಿವೃದ್ಧಿಗೋಸ್ಕರ ಇಂಥಿಂಥ ಅಭಿವೃದ್ಧಿ ಯೋಜನೆಗಳಾಗಬೇಕು ಎಂದು ಹೇಳುವುದಕ್ಕೋಸ್ಕರ ನಾವು ಇಂಥ ಒಂದು ಪ್ರತ್ಯೇಕವಾದ ಅಭಿವೃದ್ಧಿ ಮಂಡಲಿಯು ರಚನೆಯಾಗಬೇಕು ಎಂದು ಒತ್ತಾಯ ಮಾಡುತ್ತಿದ್ದೇವೆ. ಸರ್ಕಾರದವರು ನಮಗೂ ಅವರಿಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲವೆಂದು ಹೇಳಿದ್ದಾರೆ. ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಈಗ ನಾವು ಸಮ್ಮೇಳನವನ್ನು ಕೂಡ ಮಾಡುವವರಿದ್ದೇವೆ. ಸರ್ಕಾರದವರು ವಿಧಿದ್ವಾರಾ ಮಾಡಲಿ, ಮಾಡದೆ ಇರಲಿ ನಾವು ಒಂದು ಮಂಡಲಿಯನ್ನು ಮಾಡಿಕೊಳ್ಳುತ್ತೇವೆ. ಅನಂತರ ನಾವು ಸಮಗ್ರವಾಗಿ ಯೋಚನೆ ಮಾಡಿ ವಿಧಿದ್ವಾರಾ ಒಂದು ಮಂಡಲಿಯಾಗಬೇಕು ಎನ್ನುವ ಒತ್ತಾಯವನ್ನು ಮಾಡುವಂಥ ನಿರ್ಣಯವನ್ನು ತರುವವರಿದ್ದೇವೆ. ಈ ಹೊತ್ತು ಪ್ರಾರಂಭವಾಗತಕ್ಕ ಸಮ್ಮೇಳನದಲ್ಲಿ ಕೈಕೊಳ್ಳತಕ್ಕ ನಿರ್ಣಯಗಳು ಇವೆ. ಪುನಃ ಅಭಿವೃದ್ಧಿ ಮಂಡಲಿಯ ರಚನೆ ಮಾಡಲು ಒತ್ತಾಯವನ್ನು ತರುತ್ತೇವೆ. ಮಾನ್ಯ ಸರ್ಕಾರ ಈಗ ಏನು ಆಶ್ವಾಸನೆಯನ್ನು ಕೊಟ್ಟಿದೆ ಅದನ್ನು ಸಾಜನ್ಯಕ್ಕೋಸ್ಕರ, ಸುಸಂಸ್ಕೃತವಾಗಿ ನೋಡುವ ದೃಷ್ಟಿಯಿಂದ ಈ ನಿರ್ಣಯವನ್ನು ನಾನು ಬಹಳ ವ್ಯಸನದಿಂದ, ಅರೆ ಮನಸ್ಸಿನಿಂದ, ಮನಸ್ಸಿಲ್ಲದ ಮನಸ್ಸಿನಿಂದ ಕೇವಲ ಒಂದು ಸಂದಿಗ್ಧಕ್ಕೆ ಸಿಕ್ಕಿ ವಾಪಸು ತೆಗೆದುಕೊಳ್ಳುತ್ತೇನೆ.

*The Resolution was, by leave, withdrawn.

(*ii*) *Re:- Reservation of 80% of Posts in all Industries for Mysoreans.*

ಶ್ರೀ ಕೆ. ಶ್ರೀರಾಮುಲು : (ಗಾಂಧಿನಗರ) ಮಾನ್ಯ ಅಧ್ಯಕ್ಷರೇ, ನಾನು ಮಂಡಿಸುವ ನಿರ್ಣಯ ಈ ರೀತಿ ಇದೆ.—

" ರಾಜ್ಯದಲ್ಲಿರುವ ಖಾಸಗೀ ಅಥವಾ ಸರ್ಕಾರೀ ಕ್ಷೇತ್ರಗಳಲ್ಲಿನ ಎಲ್ಲಾ ಕೈಗಾರಿಕೆಗಳಲ್ಲಿ ಒಟ್ಟು ಹುದ್ದೆಗಳ ಕನಿಷ್ಟಪಕ್ಷ ಶೇಕಡ 80 ರಷ್ಟು ಹುದ್ದೆಗಳನ್ನು ಮೈಸೂರಿನವರಿಗಾಗಿ ಮೀಸಲಾಗಿಡುವಂತೆ ಶಾಸನ ರಚಿಸಿ ಜಾರಿಗೊಳಿಸಬೇಕೆಂದು ಈ ಸಭೆಯವರು ಸರ್ಕಾರದವರಿಗೆ ಶಿಫಾರಸು ಮಾಡುತ್ತಾರೆ."

ಅಧ್ಯಕ್ಷರು : ಮಾನ್ಯ ಸದಸ್ಯರ ನಿರ್ಣಯ ಹೀಗಿದೆ :—

" ರಾಜ್ಯದಲ್ಲಿರುವ ಖಾಸಗೀ ಅಥವಾ ಸರ್ಕಾರೀ ಕ್ಷೇತ್ರಗಳಲ್ಲಿನ ಎಲ್ಲಾ ಕೈಗಾರಿಕೆಗಳಲ್ಲಿ ಒಟ್ಟು ಹುದ್ದೆಗಳ ಕನಿಷ್ಟಪಕ್ಷ ಶೇಕಡ 80 ರಷ್ಟು ಹುದ್ದೆಗಳನ್ನು ಮೈಸೂರಿನವರಿಗಾಗಿ ಮೀಸಲಾಗಿಡುವಂತೆ ಶಾಸನ ರಚಿಸಿ ಜಾರಿಗೊಳಿಸಬೇಕೆಂದು ಈ ಸಭೆಯವರು ಸರ್ಕಾರದವರಿಗೆ ಶಿಫಾರಸು ಮಾಡುತ್ತಾರೆ. "

ಮಾನ್ಯ ಸದಸ್ಯರು ಮುಂದಿನ ವಾರ ಮಾತನಾಡಬಹುದು. ಮಾನ್ಯ ಸದಸ್ಯರಿಂದ ಸಭೆಯನ್ನು ಮುಂದಕ್ಕೆ ಹಾಕಬೇಕೆಂಬ ಒಂದು ಸೂಚನೆ ಈಗ ಬಂದಿದೆ. ಅದಕ್ಕೆ ಎಲ್ಲ ಪಕ್ಷಗಳವರೂ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಸಭೆ ಎದ್ದು ಸೋಮವಾರ ಮಧ್ಯಾಹ್ನ ಒಂದು ಗಂಟೆಗೆ ಸೇರುತ್ತದೆ.

The House adjourned at Twenty Minutes past Ten of the Clock to meet again (on Monday the Twentyeigth May 1973 at one of the Clock).

WD—147 GBPC-550 copies 18-2-74